ದಿನಾಂಕಃ 11.11.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ಮಾಡಿಸಲಾಯಿತು.

ಪಾಟೀ ಸವಾಲು - ಶ್ರೀ ಎಂ.ಆರ್.ಎಸ್ ವಕೀಲರಿಂದ ಆರೋಪಿ ಪರ

ನಿಪಿ1 ರಲ್ಲಿನ ಬರವಣಿಗೆ ಆರೋಪಿಯ ಬರವಣಿಗೆಯಾಗಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-1 ನ್ನು ದಿನಾಂಕ 12-7-2023 ರಂದು ಆರೋಪಿ ನನಗೆ ನೀಡಿರುತ್ತಾರೆ. ನೋಟೀಸಿಗೆ ಮಾಹಿತಿಯನ್ನು ನಾನೇ ನೀಡಿರುತ್ತೇನೆ. ಮಾಹಿತಿ ನೀಡುವ ಸಮಯದಲ್ಲಿ ನಾನು ನಿಮ್ಮ ಮತುಆರೊಪಿಯ ದಾಖಲೆ ನೀಡಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುವರು. ಆರೋಪಿ ಹಣ ಕೇಳಿದ ಬಗ್ಗೆ ಮತ್ತು ಹಣ ನೀಡಿದ ಬಗ್ಗೆ ದಾಖಲೆ ಇರುವುದಿಲ್ಲ. ನನ್ನ ಬಳಿ ಹಣ ಇತ್ತು ಎಂದು ತೋರಿಸಲು ದಾಖಲೆ ಇಲ್ಲ ಎಂದರೆ ಸರಿ.

ಆರೋಪಿ ಹಣ ಕೇಳಿದ ದಿನಾಂಕ ಮತ್ತು ನಾನು ಹಣ ನೀಡಿದ ದಿನಾಂಕ ಪಿರ್ಯಾಧಿಯಲ್ಲಿ ನಮೂದು ಮಾಡಿಲ್ಲ ಎಂದರೆ ಸರಿ. ನಾನು ಸಾಗರದಲ್ಲಿ ಹುಟ್ಟಿ ಬೆಳೆದಿರುತ್ತೇನೆ. ನನಗ ಕನ್ನಡ ಓದಲು ಬರುವುದಿಲ್ಲ ಆ ಕಾರಣ ಮುಖ್ಯ ವಿಚಾರಣೆ ಮತ್ತು ಪಿರ್ಯಾಧಿಯಲ್ಲಿ ಏನೂ ಬರೆದಿದೆ ಎಂದು ಗೊತ್ತಿಲ್ಲ. 2023 ನೇ ಇಸವಿಯಲ್ಲಿ ಮರವನ್ನು ಖರೀದಿ ಮಾಡಿ ಮಾರಾಟ ಮಾಡುತ್ತಿದ್ದೆ. ನಾನು ಟಿಂಬರ್ ವ್ಯವಹಾರವನ್ನು 15 ವರುಷದಿಂದ ಮಾಡುತ್ತಿದ್ದೆ. ನಾನು ಮರದ ಮಾರಾಟ ಮಾಡಲು ಯಾವುದೇ ಪರವಾನಗಿ ಪಡೆದಿರುವುದಿಲ್ಲ.

ಆರೋಪಿ ನನಗೆ 25 ವರುಷಗಳಿಂದ ಪರಿಚಯ. ಆರೋಪಿ ಕಾರ್ಗಲ್ ನಲ್ಲಿ ಗಾರೆ ಕೆಲಸ ಮತ್ತು ಚಾಲನೆ ಕೆಲಸ ಮಾಡುತ್ತಾನೆ ಎಂದರೆ ಸಾಕ್ಷಿ ಚಾಲಕನಾಗಿರುತ್ತಾನೆ ಎನ್ನುವರು. ಆತ ಈಗಲೂ ಸಹ ಚಾಲಕನಾಗಿರುತ್ತಾನೆ ಎಂದರೆ ಟಿಂಬರ್ ವ್ಯವಹಾರ ಮಾಡುತ್ತಾನೆ ಎನ್ನುವರು. ನನ್ನ ಮತ್ತು ಆತನ ವ್ಯವಹಾರ ಬಾಯಿ ಮಾತಿನಲ್ಲಿ ಆಗಿರುತ್ತದೆ. ಆರೋಪಿ ಟಿಂಬರ್ ಮರ್ಚೆಂಟ್ ಆಗಿರುತ್ತಾನೆ ಎಂದು ತೋರಿಸಲು ದಾಖಲೆ ಇಲ್ಲ ಎಂದರೆ ಸರಿ.

ನಾನು ರವಿ ಬೇಳೂರು ಎಂಬುವರ ವಿರುದ್ದ ಒಂದು ಚೆಕ್ ಪ್ರಕರಣ ಹೂಡಿರುತ್ತೇನೆ ಎಂದರೆ ಸರಿ. ಮರಸ ಗ್ರಾಮದ ಸ,ನಂ 253, 254 ರಲ್ಲಿ ಅಕೇಶಿಯಾ ಮರಕ್ಕೆ ಸಂಬಂಧಪಟ್ಟಂತೆ ರವಿ ಮತ್ತು ನನ್ನೊಂದಿಗೆ ವ್ಯವಹಾರ ಆಗಿರುತ್ತದೆ ಆ ಸಮಯದಲ್ಲಿ ಆರೋಪಿ ಸಹ ಹಾಜರಿದ್ದರು ಎಂದು ನಾನು ನ್ಯಾಯಾಲಯದಲ್ಲಿ ಸಾಕ್ಷಿ ನುಡಿದಿರುತ್ತೇನೆ ಎಂದರೆ ಸರಿಯಲ್ಲ. ನಾನು ಈ ವ್ಯವಹಾರ ಮರದ ವ್ಯಾಪಾರಕ್ಕೆ ಸಂಬಂಧಪಟ್ಟಂತೆ ದಾಖಲಿಸಿರುತ್ತೇನೆ ಎಂದರೆ ಸರಿ.

ನಾನು ಆರೋಪಿಗೆ ಹತ್ತು ಬಾರಿ ಹಣ ನೀಡಿರುತ್ತೇನೆ ಅದು ಸುಮಾರು 10 ವರುಷಗಳ ಹಿಂದೆ ಇರಬಹುದು. ಅದರ ಸಂಬಂಧಪಟ್ಟಂತೆ ಯಾವುದೇ ದಾಖಲೆಗಳು ಇರುವುದಿಲ್ಲ.

ಆರೋಪಿ ಹಣ ಹಿಂದಿರುಗಿಸಿದ ಬಗ್ಗೆ ಯಾವುದೇ ದಾಖಲೆ ಇರುವುದಿಲ್ಲ. ನಾನು ಮೊದಲು ಬಾರಿಗೆ ಆರೋಪಿಗೆ ಎಷ್ಟು ಬಾರಿ ಹಣನೀಡಿರುತ್ತೇನೆಂದು ದಾಖಲೆ ಇಲ್ಲ ಎಂದರೆ ಸರಿ. ಪಿರ್ಯಾಧಿಯಲ್ಲಿ ಮತ್ತು ತಿಳುವಳಿಕೆ ನೋಟೀಸುನಲ್ಲಿ ನಾನು ಆರೋಪಿಗೆ ಮೊದಲಿಂದಲೂ ಹಣವನ್ನು ನೀಡಿರುವುದಿಲ್ಲ ಮತ್ತು ಆತನೊಂದಿಗೆ ವ್ಯವಹಾರ ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

ಆರೋಪಿ ಎಸ್. ಎನ್ ನಗರ ಮತ್ತು ಜಂಬಗಾರು ನಲ್ಲಿ ವಾಸ ಮಾಡುತ್ತಾರೆ. ನನ್ನ ಮನೆ ಇರುವುದು ಅಶೋಕನಗರದಲ್ಲಿ , ನಮ್ಮ ಕುಟುಂಬದಲ್ಲಿ 5 ಜನ ಸದಸ್ಯರು ಇರುತ್ತಾರೆ. ನಮ್ಮ ಕುಟುಂಬಕ್ಕೆ ಮಾಸಿಕ ರೂ 30000-00 ಖರ್ಚು ಬೇಕಾಗುತ್ತದೆ. ನನ್ನ ಮಕ್ಕಳು ಓದುತ್ತಿದ್ದಾರೆ. ಶಾಲೆಗೆ ಸೇರಿಸುವಾಗ ಆದಾಯ ಪ್ರಮಾಣಪತ್ರದ ದಾಖಲೆಯನ್ನು ಮಾಡಿಸಿರುತ್ತೇನೆ. ನಾನು ವಾರ್ಷಿಕ ರೂ 70000-00 ಇದೆ ಎಂದು ಆದಾಯ ಪ್ರಮಾಣಪತ್ರದಲ್ಲಿ ತೋರಿಸಿರುತ್ತೇನೆ. ನನ್ನ ಬಳಿ ಪಡಿತರ ಚೀಟಿ ಮತ್ತು ಬ್ಯಾಂಕ್ ಪುಸ್ತಕಗಳು ಇರುತ್ತದೆ. 2023 ನೇ ಇಸವಿಯಲ್ಲಿ ಬ್ಯಾಂಕ್ ಪಾಸ್ ಪುಸ್ತಕ ನನ್ನ ಬಳಿ ಇರುತ್ತದೆ. ಆದರೆ ನಾನು ಯಾವುದೇ ವ್ಯವಹಾರ ವನ್ನು ಬ್ಯಾಂಕಿನಲ್ಲಿ ಮಾಡಿರುವುದಿಲ್ಲ. ಸಿಸಿ 722/2023 ರಲ್ಲಿ ನಾನು 1-1-2023 ರಿಂದ ದಿನಾಂಕ 31-1-2023 ರವರೆಗೆ ನನ್ನ ಖಾತೆಯಲ್ಲಿ ರೂ 30000-00 ಹಣ ಇತ್ತು ಎಂದು ಸಾಕ್ಷಿ ನುಡಿದಿರುತ್ತೇನೆ ಎಂದರೆ ಸರಿಯಲ್ಲ.

2023 ಜನವರಿ ಯಿಂದ ಮಾರ್ಚ್ ವೆರೆಗೆ ನನಗೆ ಎಷ್ಟು ಆದಾಯ ಇತ್ತು ಎಂದು ತೋರಿಸಲು ದಾಖಲೆ ಇಲ್ಲ ಎಂದರೆ ಸರಿ. 2023 ನೇ ಇಸವಿಯಲ್ಲಿ ನಾನು ಟಿಂಬರ್ ಮರ್ಚೆಂಟ್ ಆಗಿದ್ದೆ ಎಂದು ತೋರಿಸಲು ದಾಖಲೆ ಇಲ್ಲ ಎಂದರೆ ಸರಿ. ದಿನಾಂಕ 5-3-2023 ರಿಂದ 15-3-2023 ರವರೆಗೆ ನನ್ನ ಬಳಿ ರೂ 4,60,000-00 ಹಣ ಇತ್ತು ಎಂದು ತೋರಿಸಲು ದಾಖಲೆ ಇದೆ ಎಂದರೆ ಸರಿ. ಸಾಲ ಕೇಳಿದ 1 ತಿಂಗಳ ನಂತರ ನಾನು ಆರೋಪಿಗೆ ಹಣ ನೀಡಿರುತ್ತೇನೆ. ಆ ಸಮಯದಲ್ಲಿ ಬೇರೆ ಯಾರು ಹಾಜರು ಇರಲಿಲ್ಲ. ಆರೋಪಿ ವ್ಯವಹಾರಕ್ಕೆ ಹಣ ಬೇಕೆಂದು ಕೇಳಿ ಪಡೆದಿರುತ್ತಾರೆ ಆದರೆ ಯಾವ ವ್ಯವಹಾರ ಎಂದು ನನಗೆ ಗೊತ್ತಿಲ್ಲ. ಸಾಮಾನ್ಯವಾಗಿ ಹಣ ನೀಡುವಾಗ ಸಾಲ ಮರುಪಾವತಿ ಮಾಡುವ ಸಾಮರ್ಥ್ಯ ಇರುತ್ತದೋ ಇಲ್ಲವೋ ಎಂದು ತಿಳಿದುಕೊಳ್ಳುತ್ತೇವೆ ಎಂದರೆ ಸರಿ. ರೂ 4,60,000-00 ದೊಡ್ಡ ಮೊತ್ತದ ಹಣ ಎಂದರೆ ಸರಿ. ಹಣ ನೀಡುವಾಗ ಮಾತುಕತೆ ಮಾಡಿ ಯಾವುದೇ ಬರವಣಿಗೆ ಮಾಡಿರುವುದಿಲ್ಲ.

ನಾನು 2023 ನೇ ಇಸವಿಯಲ್ಲಿ 8-10 ಜನಕ್ಕೆ ಸಾಲ ನೀಡಿರುತ್ತೇನೆ. ನಾನು ಸುಮಾರು 10 ಲಕ್ಷ ರೂ ಸಾಲವಾಗಿ ನೀಡಿರಬಹುದು. ನಾನು ಆರೋಪಿಗೆ ರೂ 460000-00 ಸಾಲ ನೀಡಿರುತ್ತೇನೆ ಬೇರೆಯವರಿಗೆ ಕಡಿಮೆ ಮೊತ್ತದ ಸಾಲ ನೀಡಿರುತ್ತೇನೆ ಎನ್ನುವರು. ಆರೋಪಿಗೆ ಸಾಲ ಕೊಡುವ ದಿನ ನನ್ನ ಬಳಿ ಎಷ್ಟು ಹಣ ಇತ್ತು ಎಂದು ಗೊತ್ತಿಲ್ಲ. ಮಾರ್ಚ್ 2023 ರಲ್ಲಿ ನನ್ನ ಬ್ಯಾಂಕ್ ಖಾತೆ ಚಾಲ್ತಿಯಲ್ಲಿತ್ತು. ಆರೋಪಿಗೆ ಚೆಕ್ ಮೂಲಕ ಹಣ ನೀಡಲು ನನಗೆ ತೊಂದರೆ ಇರಲಿಲ್ಲ ಎಂದರೆ ಸರಿ. ಆರೋಪಿ ಹಂತ ಹಂತವಾಗಿ ಹಣ ನೀಡುತ್ತೇನೆಂದು ಹೇಳಿ ಯಾವುದೇ ಮಾತುಕತೆಯಾಗಿರುವುದಿಲ್ಲ. ಆರೋಪಿಗೆ ನೀಡಿದ ಹಣ 3-4 ಜನರಿಂದ ಟಿಂಬರ್ ವ್ಯಾಪಾರದಿಂದ ಬಂದಿರುತ್ತದೆ. ಸದರಿ ವ್ಯಕ್ತಿಗಳ ಹೆಸರು ನನಗೆ ಈಗ ನೆನಪಿರುವುದಿಲ್ಲ ಸಾಕ್ಷಿ ಮುಂದುವರಿದು ಗೊತ್ತಿರುವುದಿಲ್ಲ ಎನ್ನುವರು.

ಮುಂದುವರೆದ ಪಾಟೀ ಸವಾಲಿಗೆ ಸಮಾಯಾವಕಾಶವನ್ನು ನೀಡಲಾಯಿತು.

(ತೆರೆದ ನ್ಯಾ.ದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಣಗೊಳಿಸಲಾಯಿತು)

ಪ್ರಧಾನ ಹಿರಿಯ ವ್ಯವಹಾರ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ. ದಂಡಾಧಿಕಾರಿಗಳು, ಸಾಗರ